ಮೊಕ್ಕಾಂ ಮೈಸೂರು, ತಾರೀಖು 24ನೆ ಜೂ॥ 1907.

ಕ್ಯಾಂಪು ನಂ. 13, ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ತೆಗೆದುಹಾಕಿದ ಪ್ರಯುಕ್ತ—

ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ವಿ॥ ಟಿ. ಪರಮಶಿವ ಐಯ್ಯರ್, ಬಿ. ಎ., ಯವರನ್ನು, ವಿ॥ ಎಸ್. ವೆಂಕಟವರ್ದ ಐಯ್ಯಂಗಾರ್ರು ಕೆಲಸದಿಂದ ನಿವೃತ್ತರಾಗುವ ತಾರೀಖು ಮೊದಲ್ಗೊಂಡು, ಮೈಸೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ಗಾಗಿ ನೇಮಕರ್ಮಾಡಿದೆ.

ಮೊಕಾಂ ಮೈಸೂರು, ತಾರೀಖು 24ನೆ ಜೂ॥ 1907.

ಕ್ಯಾಂಪು ನಂ. 18, ಸರ್ಕಾರಿ ಕೆಲಸವು ಸರಿಯಾಗಿ ನಡೆಯತಕ್ಕ ಬಗ್ಗೆ ಕೆಳಗೆ ಕಂಡ ಜುಡಿಷಲ್ ಅಧಿಕಾರಿಗಳ ವರ್ಗಾವರ್ಗಿಗಳನ್ನೂ, ಸ್ಥಳ ನಿರ್ಣಯಗಳನ್ನೂ 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮಂಜೂರ್ಮಾಡಿದೆ:

(1) ಸಬ್ ಜಡ್ಜ್ ವಿ॥ ಮಿರ್ ಹಂಜಾಹುಸೇ, ಬಿ. ಎ., ಬಿ. ಎಲ್, ಮೈಸೂರಿಂದ ಶಿವಮೊಗ್ಗಕ್ಕೆ.

(2) ಸಬ್ ಜಡ್ಜ್ ವಿ॥ ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ., ಬಿ. ಎಲ್, ಶಿವಮೊಗ್ಗದಿಂದ ಮೈಸೂರಿಗೆ.

(3) ಚಿಕ್ಕಮಗಳೂರಿನ ಸಬ್ ಜಡ್ಜ್ ವಿ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್, ರವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ.

ತಾರೀಖು 21ನೆ ಜೂ॥ 1907.

ನಂ. ರೆ. 10846—ಲ್ಯಾ. ಸ. 75-06-2, ಸರ್ವೆ ಮತ್ತು ಸೆಟ್ಲ್ಮೆಂಟ್ ಕಮಿಷನರ್ ಮತ್ತು ಇನಾಂ ಸೆಟ್ಲ್ಮೆಂಟುಗಳ ಸೂಪರಿಟೆಂಡೆಂಟ್ ಕರ್ನಲ್ ಜೆ. ಪಿ. ಗ್ರ್ಯಾಂಟ್ ರವರು 1907ನೆ ಇಸವಿಯ ಜುಲೈ 1ನೆ ತಾರೀಖಿನಲ್ಲಿ ಕೆಲಸದಿಂದ ನಿವೃತ್ತರಾದಾಗ್ಗೆ, ಸರ್ವೆ ಮತ್ತು ಸೆಟ್ಲ್ಮೆಂಟು ಕಮಿಷನರ ಉದ್ಯೋಗವನ್ನು ತೆಗದುಹಾಕಬೇಕೆಂದೂ, ಮತ್ತು ಇನಾಂ ಇಲಾಖೆಯ ಚಾರ್ಜ್, ಹಂಗಾಮಿಯಾಗಿ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ, ಸರ್ವೆ ಮತ್ತು ಸೆಟ್ಲ್ಮೆಂಟ್ ಸೂಪರಿಟೆಂಡೆಂಟಿಗೆ ವಹಿಸಲ್ಪಡಬೇಕೆಂದೂ ವಿಧಿಸಲು ಶ್ರೀಮನ್ ಮಹಾರಾಜರವರ ಸರ್ಕಾರದವರು ಆಜ್ಞೆ ದಯಪಾಲಿಸಿರುತ್ತಾರೆ.

ತಾರೀಖು 27ನೆ ಜೂ॥ 1907.

ನಂ. ರೆ. 10902—ಲ್ಯಾ. ರೆ. 609-06-1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಗಳನ್ನೂ ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ:—

(1) ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಕರ್ಮಾಡಲ್ಪಟ್ಟ, ವಿ॥ ಬಿ. ಜೆ. ಕೊಮಾರಸಾಮಿ ನಾಯಕರಿಗೆ ಬದಲಾಗಿ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ವಿ॥ ಟಿ. ಧರ್ಮರಾಜ ಶೆಟ್ಟರನ್ನು ಹಾಸನದಿಂದ ಚಿಕ್ಕಳಕೆರೆ ಸಬ್ ಡಿವಿಜನಿನ ಚಾರ್ಜ್ ಬಗ್ಗೆ ಚಿತ್ರದುರ್ಗಕ್ಕೆ. (ಬಡೆನೆಯೇ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(2) ಶಿವಮೊಗ್ಗ ಡಿಸ್ಟ್ರಿಕ್ಟ್ನಲ್ಲಿ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿರುವ ವಿ॥ ಎ. ಕೃಷ್ಣಸಾಮೈಯ್ಯಂಗಾರ್, ಬಿ. ಎ. ಯವರನ್ನು, ಹಂಗಾಮಿಯಾಗಿ, ಖಜಾನೆಯ ಚಾರ್ಜಿನ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ. (ವಿ॥ ವೇದಾಂತ ದೇಶಿಗಂ ಐಯ್ಯಂಗಾರ್ರಿಂದ ಶಿವಮೊಗ್ಗೆಯ ಚಾರ್ಜ್ ವಹಿಸಲ್ಪಟ್ಟ ತರುವಾಯ ಈ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 8ನೆ ಜುಲೈ 1907.

ನಂ. ರೆ. 240—ಲ್ಯಾ. ರೆ. 21-07—1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಇದರಡಿ ಕಂಡ ಅವ್ವಲ್ದಾರರುಗಳ ಮತ್ತು ಡೆಪ್ಯುಟಿ ಅವಲ್ದಾರರುಗಳ ವರ್ಗಾವರ್ಗಿಗಳನ್ನೂ, ಹಂಗಾಮಿ ನೇಮಕರಾತಿಗಳನ್ನೂ, ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ:—

	ಎಲ್ಲಿಂದ.	ಎಲ್ಲಿಗೆ.
ವಿ॥ ಸಿ. ರಂಗನಾಥರಾವ್ ಸಾಹೆಬ್	... ದೊಡ್ಡಬಳ್ಳಾಪುರ	ಚನ್ನಪಟ್ಟಣ
,, ಎಂ. ಸದಾಶಿವರಾವ್	... ನೆಲಮಂಗಲ	ದೊಡ್ಡ ಬಳ್ಳಾಪುರ
,, ಸಿ. ಕೃಷ್ಣರಾವ್	... ಚಾವುರಾಜನಗರ	ನೆಲಮಂಗಲ
,, ಎಸ್. ವೆಂಕಟರಮಣ ಶಾಸ್ತ್ರಿ	... ಶ್ರೀನಿವಾಸಪುರ	ಚಾವುರಾಜನಗರ

ಬೆಂಗಳೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಶಿರಸ್ತೆದಾರ್, ವಿ॥ ವೈ. ನರಸಿಂಗರಾಯರು ಶ್ರೀನಿವಾಸಪುರ ತಾಲ್ಲೂಕಿನ ಅವಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೇಮಕತಕ್ಕದ್ದು.

	ಎಲ್ಲಿಂದ.	ಎಲ್ಲಿಗೆ.
ವಿ॥ ಸೈಯದ್ ಯಾಕೂಬ್	... ಶ್ರೀರಂಗಪಟ್ಟಣ	ಮೈಸೂರು
,, ಷೇಕ ಅಬ್ದುಲ್ಲಾ	... ಚನ್ನಗಿರಿ	ಶ್ರೀರಂಗಪಟ್ಟಣ
,, ಬಿ. ಸಿ. ಕೇಶವಯ್ಯ	... ಮೊಳಕಾಲ್ಮೂರು	ಚನ್ನಗಿರಿ.